1	2	3	4	5	6	7
	GH, Basavakalyana			2		
	DH, Bidar					
27.	**DHO, Bellary**		4			
	GH, Sirguppa			3		
	PCH, Sandur			2		
	GH, H.B. Hali			1		
	GH, Hadagali			3		
	GH, Kudlagi			4		
	CHC, CJ. Halli			1		
	TOTAL	**29**	**75**	**311**	**121**	**536**

ರಾಜ್ಯದ ಸರ್ಕಾರಿ ಗ್ರಂಥಾಲಯ ಇಲಾಖೆಯಲ್ಲಿನ ಮೇಲ್ವಿಚಾರಕರ ಹುದ್ದೆಯನ್ನು ಖಾಯಂ ಗೊಳಿಸುವುದು

975 (1174) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಗ್ರಂಥಾಲಯದಲ್ಲಿ ಮೇಲ್ವಿಚಾರಕರ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಎಷ್ಟು ಜನ ಮೇಲ್ವಿಚಾರಕರು ಗ್ರಂಥಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದಾರೆ, (ಜಿಲ್ಲಾವಾರು ವಿವರ ನೀಡುವುದು)

ಇ) ಈ ಮೇಲ್ವಿಚಾರಕರನ್ನು ಖಾಯಂಗೊಳಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ? ಇದ್ದರೆ ಯಾವಾಗ ಇವರುಗಳನ್ನು ಖಾಯಂಗೊಳಿಸಲಾಗುತ್ತಿದೆ?

ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ ಸರ್ಕಾರಿ ಗ್ರಂಥಾಲಯದಲ್ಲಿ ಮೇಲ್ವಿಚಾರಕರ ಹುದ್ದೆಗಳ ಸಂಖ್ಯೆ 2751

ಆ) ಗುತ್ತಿಗೆ ಆಧಾರದ ಮೇಲೆ ಯಾರೂ ಸೇವೆ ಸಲ್ಲಿಸುತ್ತಿಲ್ಲ. ಆದರೆ ಗೌರವ ಧನದ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದಾರೆ.

ಇ) ಇಲ್ಲ

ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಅಂಕಪಟ್ಟಿಗಳಲ್ಲಿ ನಡೆಯತಕ್ಕ ಅವ್ಯವಹಾರಗಳು

976 (1149) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಪ್ರತಿ ವರ್ಷ ಪದವಿ ತೆಗೆದುಕೊಳ್ಳುತ್ತಿರುವವರ ಸರಾಸರಿ ಸಂಖ್ಯೆ ಎಷ್ಟು

ಇ) ಅಂಕಪಟ್ಟಿಗಳಲ್ಲಿ ನಡೆಯತಕ್ಕ ಅವ್ಯವಹಾರಗಳನ್ನು ತಡೆಗಟ್ಟಲು ಅಂಕಪಟ್ಟಿಗಳಿಗೆ ಹಾಗೂ ಪದವಿ ಸರ್ಟಿಫಿಕೇಟುಗಳಲ್ಲಿ ಪದವೀಧರರ ಭಾವಚಿತ್ರವನ್ನು ಅಳವಡಿಸಲು ಸರ್ಕಾರ ಆಲೋಚಿಸಿದೆಯೇ?